Regd No M 1299 34 th Year ತಾ|| 30—7—51

SATYAVADI

ಸತ್ಯವಾದಿ

ಸಂಪಾದಕರು- ಆರಮನೆ ಸಿರಸ್ತೆದಾರ್ ಎ೦. ಎ. ಸುಬ್ರಾಯುರು [ಬಿಡಿ ಪ್ರತಿ 3 ಪೈ

ಸಿಂಧಿನಲ್ಲಿ ವಿನೂತನ ಧಾಳಿ ಮುಂ ಜಾಗ್ರತೆಗಾಗಿ 2 ಲಕ್ಷ ರೂ ಮಂಜೂ ರಾಗಿದೆ

ಉಡ್‌ಲಾಂಡ್ಸ್

— 4 ನೇ ವಾರ —

ದುಲ್‌ಖುಷ್ ಪಂಜೋಲಿಯವರ

ನಗೀನಾ

— ಪಾತ್ರ —

ನೂರ್ಜ, ನಾಸಿರ್ ಖಾಜ್, ಗೋಪ್

ಪ್ರತಿ ದಿನ 3 ಪ್ರದರ್ಶನಗಳು

ರಣಜಿತ್

ಅಮೋಘ 4 ನೇ ವಾರ

ಅಶೋಕಕುಮಾರ್, ನಿಮ್ಮಿ,
ದಿಲೀಪಕುಮಾರ್, ನರ್ಗಿಸ್ ನಟಿಸಿರುವ

ದೀದಾರ್

[ಹಿಂದಿ] Deedar

ಪ್ರತಿ ದಿನ 3 ಆಟಗಳು

= OPERA =

July 31 st

Elizebeth Ladymead

(Technicolor)

Starring — Anna Neagle

— Next —

Pygmy Island

ದಿವ್ಯವಾಣಿ

ನಿನ್ನಲ್ಲಿ ಯೋಚನೆ ಮಾಡುವ ಶಕ್ತಿ ಇಲ್ಲದಿದ್ದರೆ ನಿನ್ನನ್ನು ಮಾನವನೆಂದು ತಿ ದುಕೊಳ್ಳಲೇಬೇಡ

— ಕಾಲರಿಡ್ಜ

ಚುನಾವಣೆ ರದ್ದು

ಸೂರತ್ತಿನ ಕಲೆಕ್ಟರರು ರಾಂಡೇರ ಪೌರಸಭೆಯ ಕಾದಿಟ್ಟ ಸ್ಥಾನ ಸ್ಥಳಕ್ಕೆ ಅವಿರೋಧವಾಗಿ ಆರಿಸಿಬಂದ ಕುಮಾರಿ ತಾಹೆರುನಿಸ್ಸಾ ಮುಹಮದ್ ಮಲಿಕ್ ಇವರ ಸದಸ್ಯತ್ವವನ್ನು ರದ್ದು ಮಾಡಿ ಆ ಸ್ಥಳಕ್ಕೆ ಮತ್ತೆ ಚುನಾವಣೆ ನಡೆಸಬೇಕೆಂದು ಸಾರಿದ್ದಾರೆ ಕುಮಾರಿ ತಾಹರುನಿಸ್ಸಾ ಅವರು ಚುನಾವಣೆ ಕಾಲಕ್ಕೆ 21 ವರ್ಷಕ್ಕೆ ಕಡಿಮೆ ಇದ್ದುದೇ ಕಾರಣವಾಗಿದೆ

ಬಂಧಿಸಲಾಯಿತು

ಮಿಲಿಟರಿ ಬಂಕರ್ ಒಳಿಯಲ್ಲಿ ಸಂಶಯದ ರೀತಿಯಲ್ಲಿ ಅಲೆದಾಡುತ್ತಿದ್ದ ಪಾಕಿಸ್ತಾನಿ ಮುಸಲ್ಮಾನನೊಬ್ಬನು ಸೈನ್ಯದ ಕಾವಲುಗಾರನಿಂದ ಬಂಧಿತನಾಗಿ ಪೋಲೀಸ್ತರ ವಶಕ್ಕೆ ಒಪ್ಪಿಸಲ್ಪಟ್ಟಿರುವನು — ಹೀಗೆಂದು ಅಂಬಾಲಾ ವಾರ್ತೆ

ಹಿಂದೂ ದೇವಾಲಯ ನಾಶವಾಯಿತು

ಕ್ವೆಟ್ಟಾನಿಗೆ 9 ಮೈಲುಗಳ ದೂರದಲ್ಲಿರುವ ಪ್ರಸಿದ್ಧ ಏಕನಾಥೇಶ್ವರಿ ದೇವಿ ದೇವಾಲಯವು ನಾಶ ಮಾಡಲ್ಪಟ್ಟಿದೆ ಎಗ್ಗು ಹವು ದೇವಾಲಯದ ಕೊಳಕ್ಕೆ ಎಸೆಯಲ್ಪಟ್ಟಿದೆ ಹಣದ ಪೆಟ್ಟಿಗೆಯು ಅಪಹರಿಸಲ್ಪಟ್ಟಿದೆ

ಬೆಂಗಳೂರು ಮೇಲೆ ಕಣ್ಣು ?

ಭಾರತದ ಮೇಲೆ ಪಾಕಿಸ್ತಾನ ಧಾಳಿ ಮಾಡಿದರೆ ಬೆಂಗಳೂರು ವಿಮಾನ ಕಾರ್ಖಾನೆ ಮೇಲೆ ಧಾಳಿ ಮಾಡಬಹುದೆಂದು ಹೇಳಲಾಗಿದೆ

ಆಯುಧ ಕೊಳ್ಳಲು ಲಾಯಕ್‌ಆಲಿ ಯುರೋಪಿಗೆ ಹೋದರು

ಕರಾಚಿ — ಹೈದರಾಬಾದಿನ ಮಾಜಿ ಪ್ರಧಾನಿ ಎಸ್. ಲಾಯಕ್ ಅಲಿ ಯನ್ನು ಶಸ್ತ್ರಾಸ್ತ್ರ ಕೊಳ್ಳಲು ಪಾಕಿಸ್ತಾನ ಸರ್ಕಾರ ಯುರೋಪಿಗೆ ಕಳಿಸಿದೆ ಅವರು ಇಂಗ್ಲೆಂಡಿಗೆ ಹೋಗುವ ನಿರೀಕ್ಷೆ ಇದೆ. ಮಾಜಿ ಸೇನಿಕರ ಸೇನೆ ಸೇರಲು ಸಿದ್ಧರಿರಲು ತಿಳಿಸಲಾಗಿದೆ

— ಅಕ್ಕಿಯನ್ನು ನುತಿತು ಬಿಡಿ ಎಂದು ಸಚಿವ ಶ್ರೀ ಮುನ್ಷಿ ಬೊಂಬಾಯಿ-ನಲ್ಲಿ ಹೇಳಿದ್ದಾರೆ.

— ಪಾಕಿಸ್ತಾನಕ್ಕೆ ತೀವ್ರ ಎಚ್ಚರಿಕೆ ಕೊಡಬೇಕೆಂದು ಡಾ|| ಶಾಂಪ್ರಸಾದ ಮುಖರ್ಜಿ ಕಾಂಚಾರಪಾರದಲ್ಲಿ ತಿಳಿಸಿದ್ದಾರೆ.

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ

ಮೈಸೂರು : ಸುಪ್ರಸಿದ್ಧ ಸಂಗೀತ ವಿದ್ವಾಂಸರಾದ ಮೈಸೂರು ಸಹೋದರಿ ಶ್ರೀ ವರಲಕ್ಷ್ಮಿ ಸಂಗೀತ ಮಂದಿರದ ಕೃಷ್ಣನಾರ್ತಿಪುರಂ ಶಾಖೆಯಲ್ಲಿ ನೊನ್ನೆ ದಿನ ಶ್ರೀಮನ್ಮಹಾರಾಜರವರ ವರ್ಧಂತಿ ಮಹೋತ್ಸವ ವೈಭವದಿಂದ ನಿರ್ವೇರಿತು. ದರ್ಬಾರ್‌ಭಕ್ತಿಯುವರಾದ ಶ್ರೀ ಎಲ್. ದೇವರಾಜಅರಸಿನವರು ಉತ್ಸವದ ಅಧ್ಯಕ್ಷರಾಗಿದ್ದರು.

ನಿಯಂತ್ರಣ ಹೋಗಲು ಬೆಂಬಲಿಸುವವರನ್ನು ಚುನಾಯಿಸಿ

ಭಾರತ ಪಾರ್ಲಿಮೆಂಟಿನ ಅಧ್ಯಕ್ಷ ಶ್ರೀ ಜಿ. ವಿ. ಮಾಲವಂಕರರು ಇತ್ತೀಚಿಗೆ ಅಹಮದಾಬಾದಿನ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡ ತ್ತಾ ನಿಯಂತ್ರಣಗಳು ಹೋಗಲೇಬೇಕು. ನಿಯಂತ್ರಣಗಳ ನಿರ್ಮೂಲನೆಗಾಗಿ ಬೆಂಬಲ ನೀಡುವವರನ್ನೇ ಮುಂಬರುವ ಚುನಾವಣೆಯಲ್ಲಿ ಆರಿಸಬೇಕೆಂದು ಕಾಂಗ್ರೆಸ್ ಪ್ರತಿನಿಧಿಗಳಿಗೆ ಹೇಳಲು ಎದೆಗಾರಿಕೆ ತೋರಬೇಕೆಂದು ಹೇಳಿದರು.

ತನಿಖೆ ನಡೀತಿದೆ

ಚಾಮರಾಜನಗರ ತಾಲ್ಲೂಕು ಮಾದಾಪುರ ಎಂಬ ಊರಿನಲ್ಲಿ ಉಪಾಧ್ಯಾಯರಾಗಿರುವ ಶ್ರೀ ವೇದನಿತ್ಯ ಎಂಬವರು ಮೈಸೂರಿನ ಮೊದಲನೆ ಈದಿಗಾದಲ್ಲಿ ವಾಸವಾಗಿರುವ ಶೇಷಮ್ಮ ಎಂಬವರ 14 ವರ್ಷದ ಮಗಳು ಜಯಲಕ್ಷ್ಮಮ್ಮ ಎಂಬವಳನ್ನು ಅಪಹರಿಸಿಕೊಂಡು ಹೋದ್ದೂರು ಒಂದುದಿಂದ ಪೋಲೀಸರು ಮಾದಾಪುರದಿಂದ ಅವರನ್ನು ಕರೆದು ಕೊಂಡು ಬಂದು ತನಿಖೆ ಕ್ರಮ ನಡೆಸುತ್ತಿದ್ದಾರೆ.

ನೂರು ವರ್ಷದ ಆಸ್ಪತ್ರೆ

ಮಧ್ಯ ಉತ್ತರ ಪ್ರದೇಶದ ಫರೂಕಬಾದ್ ಮತ್ತು ಫತೇಗರ ಮಧ್ಯೆ ಒಂದು ನೂರು ವರ್ಷದ ಹಿಂದಿನ ವಿಷ್ಣು ಆಸ್ಪತ್ರೆ ಇದೆ. ಆ ಆಸ್ಪತ್ರೆಯಲ್ಲಿ ಪ್ರತಿ ವರ್ಷ ಕಾಲು ಲಕ್ಷ ಜನರಿಗೆ ಔಷಧಿಯನ್ನು ಉಪಚರಿಸುವರು

ರಸಾಯನಿಕ ವಸ್ತು

ತಾಯಿಯ ಹಾಲಿನಲ್ಲಿ ಎರಡು ರಸಾಯನಿಕ ಪದಾರ್ಥಗಳಿವೆಯೆಂದು ಅಮೇರಿಕ ವಿಜ್ಞಾನಿಗಳು ಪತ್ತೆಹಚ್ಚಿದ್ದಾರೆ. ಅವುಗಳಿಂದ ಹಳದಿಜ್ವರ ಮುಂತಾದ ಕಾಯಿಲೆಗಳು ಮಕ್ಕಳಿಗೆ ಬರುವದಿಲ್ಲ.

ಉಳುವ ಯಂತ್ರ

ಮೂವತ್ತೈದು ನಿಮಿಷಕ್ಕೆ ಒಂದು ಎಕರೆ ಭೂಮಿ ಯನ್ನು ಅಬಾದಿಗೆ ತರುವ ಹೊಸ ರೋಟರಿ ಯಂತ್ರವನ್ನು ಅಮೇರಿಕದಲ್ಲಿ ಆವಿಷ್ಕರಿಸಲಾಗಿದೆ

ಓಡಿ ಬಂದರು

ಸಿಕಿಯಾಂಗಿನ ಚೀನ ಪ್ರಾಂತ್ಯವನ್ನು ಕಮ್ಯುನಿಸ್ಟರು ಪಡೆದ ಮೇಲೆ ಅಲ್ಲಿನ 23 ಬಿಳಿ ರಷ್ಯನರು ಜೀವನವನ್ನು ಸಹಿಸಲಾರದೆ ಭಾರತದ ಗಡಿ ಪ್ರದೇಶ ಕಾಲಿಪಾಂಗಿಗೆ ಓಡಿಬಂದರೆಂದು ವರದಿ ಆಗಿದೆ.

ನಿಧಿ ಸಂಗ್ರಹವಾಯಿತು

ಬೆಳಗಾವಿ ಗೃಹರಕ್ಷಕ ದಳದವರು ಇತ್ತೀಚಿಗೆ ಸಾಮಾಜಿಕ ಚಂದ್ರಗುಪ್ತ ಎಂಬ ನಾಟಕ ಪ್ರದರ್ಶನ ಉತ್ಪತ್ತಿಯಾದ ರೂ 1004 ಅನ್ನಾಂ, ಬಿಹಾರ ಪರಿಹಾರ ನಿಧಿಗೆ ಕೊಡಲಾಯಿತು

ನಿಯಂತ್ರಣ ರದ್ದಾಗಬೇಕು

ಮೈಸೂರು ಟೌನ್‌ಹಾಲಿನಲ್ಲಿ ನಿನ್ನೆ ಜರುಗಿದ ಜನತಾ ಪಾರ್ಟಿಯ ಬಹಿರಂಗ ಸಭೆಯಲ್ಲಿ ನಿಯಂತ್ರಣ ರದ್ದಾಗಬೇಕೆಂಬ ನಿರ್ಣಯ ಸರ್ವಾನುಮತದಿಂದ ಅಂಗೀಕೃತವಾಯಿತು

ಸಂಪುಟ ೪ ಸಂಚಿಕೆ ೪೫ ॥ ಶ್ರೀ ॥ ತಾ॥ 30-7-1951

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದ ಮಂಡಲಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟಣಮಾಲೆ —
ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

ಸಿಂಹಳ ದ್ವೀಪವು ಲಂಕೆಯಲ್ಲ

(ಮುಂದುವರಿದುದು)

೨. ಲಕ್ಕೇದೀವ ಪ್ರದೇಶದಿಂದ ದಕ್ಷಿಣಕ್ಕೆ ನಿರಕ್ಷದೇಶದ ಸಮೀಪದಲ್ಲಿ 'ಮಾಲ್‌ದೀವ್' ಎಂಬ ಯಾವ ಸ್ಥಾನವನ್ನು ಕಾಣುತ್ತಿರುವೆವೋ ಅದು ನಿಶ್ಚಯತಃ ಮಾಲೇಯದ್ವೀಪವೆಂದಾಗಲೀ ಮಾಲದ್ವೀಪವೆಂದಾಗಲೀ ಇದ್ದಿರಬಹುದು; ಮಾಲಿಯೆಂಬ ರಾಕ್ಷಸನ ನಿವಾಸೋಪಲಕ್ಷಿತವಾದ ಸ್ಥಾನವು ಮಾಲಿದ್ವೀಪ ಅಥವಾ ಮಾಲಿಯ ಪುತ್ರರಾದ ಅನಲ, ಅನಿಲ, ಹರ, ಸಂಪಾತಿಗಳಿಗೆ ಮಾಲೇಯ ಸಂಜ್ಞೆಯಿರುವುದಾಗಿ ರಾಮಾಯಣದ ಉತ್ತರಕಾಂಡದಲ್ಲಿ ಹೇಳಿದೆ. ಇವರು ವಿಭೀಷಣನ ಮಾವಂದಿರೂ, ಅಮಾತ್ಯರೂ ಆಗಿದ್ದರು. ಅವರು ನಿವಾಸವಿರುವ ಸ್ಥಳವು ಮಾಲೇಯದ್ವೀಪ. ಈ ಮಾಲದೀವನೆಂಬ ಮಾಲದ್ವೀಪವು ಈಗ ಲಕ್ಕದ್ವೀಪಕ್ಕಿಂತ ಬೇರೆಯಾಗಿ ತೋರುತ್ತಿರುವುದಾದರೂ ಪೂರ್ವದಲ್ಲಿ ಖಂಡಿತವಾಗಿ ಇದು ಲಂಕೆಯದೇ ಒಂದು ದಕ್ಷಿಣಪ್ರಾಂತವಾಗಿದ್ದಿತು. ಏಕೆಂದರೆ, ಲಕ್ಷಾಧಿಪತಿಯಾದ ಮಾಲ್ಯವಂತನ ಕೀರ್ತಿ ತವಸ್ಸೆಂದೂ, ಅತನ ಸೇನಾಪತಿಯೆಂದೂ ಪ್ರಸಿದ್ಧನಾದ ಮಾಲಿಯು ಲಂಕೆಯಿಂದ ಅತಿದೂರದ ದ್ವೀಪಾಂತರದಲ್ಲಿರುವುದೆಂಬುದು ಸಮಂಜಸವಾಗುವುದಿಲ್ಲ. ಈ ರೀತಿಯಾಗಿ ಲಂಕಾವಾಸಿಯೆಂದು ಪ್ರಸಿದ್ಧನಾಗಿದ್ದ ಮಾಲಿ ರಾಕ್ಷಸನ ನಿವಾಸಸ್ಥಾನರೂಪವಾದ ಮಾಲಿದ್ವೀಪದ ಸಮೀಪದಲ್ಲಿರುವುದರಿಂದ ಈ ಲಕ್ಕದೀವವು ಲಂಕಾದ್ವೀಪವೆನ್ನುವುದು ಉಪಪನ್ನವಾಗುತ್ತದೆಂಬುದು ಎಂಡಸೆಯದು

೩. ಈಗ ಉಪಲಬ್ಧವಾಗಿರುವ ಲಕ್ಕೇದ್ವೀಪದಿಂದಾರಂಭಿಸಿ ನಿರಕ್ಷವೃತ್ತಕ್ಕಿಂತಲೂ ದಕ್ಷಿಣದಲ್ಲಿ ಕಲದೂರಪರ್ಯಂತ ಲಂಕೆಯು ಸನ್ನಿವಿಷ್ಟವಾಗಿರುವುದರಿಂದ, ಈಗ ಲಕ್ಕೇದೀವಮಾಲದೀವಗಳು ಬೇರೆಬೇರೆಯಾಗಿ ಉಪಲಬ್ಧವಾಗಿದ್ದರೂ ಪೂರ್ವ ಕಾಲದಲ್ಲಿ ಇನೆರಡೂ ಒಂದೇ ಲಂಕೆಯ ಪ್ರಾಂತವಿಶೇಷಗಳೆಂದು ಒಪ್ಪಬೇಕಾದ್ದರಿಂದ, ಹಿಂದೆ ಲಂಕಾದ್ವೀಪ-ಮಾಲಿದ್ವೀಪಗಳು ಒಂದೇ ಅರ್ಥದಲ್ಲಿ ಇರುತ್ತಿದ್ದವು. ಈ ಲಂಕೆಯಲ್ಲಿ ಮೊಕ್ಕನೊದಲು ಸಾಲಕಟಂಕಟ ವಂಶದ ರಾಕ್ಷಸರು ವಾಸಿಸುತ್ತಿದ್ದರು. ಅವರಿಗೆ ಅದೇ ವಂಶದ ಮಾಲ್ಯವಾನ್ ಎಂಬ ಅರಸನಿದ್ದನು. ಮಾಲ್ಯವಂತನ ತಮ್ಮನಾದ ಸುಮಾಲಿಯು ಪ್ರಧಾನವಂತ್ರಿಯಾಗಿಯೂ ಕಿರಿಯ ತಮ್ಮನಾದ ಮಾಲಿಯು ಪ್ರಧಾನ ಸೇನಾಪತಿಯಾಗಿಯು ಇದ್ದು ಈ ಮೂವರು ಸುಕೇಶಪುತ್ರರೂ, ವಿದ್ಯುತ್ಕೇಶಪೌತ್ರರೂ, ಪ್ರದೀತಿ ಪ್ರಪೌತ್ರರೂ ಆದ ಸೋದರರು ಪ್ರಾಧಾನ್ಯವಾಗಿ ಈ ಲಂಕೆಯ ಶಾಸಕರಾಗಿದ್ದರು. ಬಲದರ್ಪಾದಾಂಧರಾದ ಇವರಿಂದ ಪುನಃ ಪುನಃ ಪೀಡಿತರಾದ ಪ್ರಜೆಗಳ ಕೃಷ್ಣನಿಗಾಗಿ ಈ ಮೂವರೂ ವಿಷ್ಣುವಿನಿಂದ ಸೆಳಿಯಲ್ಪಟ್ಟ ರಾಜ್ಯಾಧಿಕಾರವುಳ್ಳವರಾಗಿ, ಲಂಕೆಯಿಂದ ಹೊರಡಿಸಲ್ಪಟ್ಟ ಕೆಳಗಡೆ ಪಾತಾಳಕ್ಕೆ ಹೋಗಿ ಅಲ್ಲಿಯೇ ಸಪರಿವಾರರಾಗಿ ನೆಲೆಸಿದರು. ಇದೆಲ್ಲವೂ ಉತ್ತರ ರಾಮಾಯಣದಲ್ಲಿ ಉಕ್ತವಾಗಿದೆ ಅನೇಕ ಸಾಲಕಟಂಕಟರೆಂಬ ಮಾಲ್ಯವತ್ಪ್ರಭೃತಿಗಳು ಪಾತಾಳಕ್ಕೆ ಹೋಗಲಾಗಿ ಕಲದೂರನು ಬಂದು ಈ ಲಂಕೆಯನ್ನು ಆಳಿದನು. ಕೆಲ ಶತಮಾನಂತರ ಮಾಲ್ಯವಂತನ ತಮ್ಮನಾದ ಸುಮಾಲಿಯ ಮಗಳಾದ ಕೈಕಸಿಯಲ್ಲಿ ಪೌಲಸ್ತ್ಯಮಹರ್ಷಿಯಿಂದ ರಾವಣಕುಂಭಕರ್ಣಶೂರ್ಪಣಖಾವಿಭೀಷಣರು ಹುಟ್ಟಿದರು. ಅವರ ಬಲದಿಂದ ದರ್ಪಿತನಾದ ಸುಮಾಲಿಯು ಮೊಮ್ಮಗನಾದ ರಾವಣನನ್ನು ಕುಬೇರನಿಂದ ಲಂಕೆಯನ್ನು ಕಿತ್ತುಕೊಳ್ಳಲು ಕಳುಹಿಸಿದನು. ಆ ರಾವಣನು ಯುದ್ಧವಿಲ್ಲದೆ ಕುಬೇರನಿಂದ ಲಂಕೆಯನ್ನು ಪಡೆದು ಅಲ್ಲಿ ಅರಸನಾದನು. ಅಂದಿನಿಂದ ಪೌಲಸ್ತ್ಯರಾದ ರಾಕ್ಷಸರು ಪ್ರಾಧಾನ್ಯದಿಂದ ಲಂಕೆಯನ್ನಧಿಷ್ಠಿಸಿ ಸಾಲಕಟಂಕಟ ರಾಕ್ಷಸರನ್ನೂ ತಮ್ಮಧೀನರನ್ನಾಗಿ ಪಾಲಿಸಿದರು. ಹೀಗಾಗಿ ಈ ಲಂಕಾನಗರಿಯಲ್ಲಿ ಮೂರು ಕಕ್ಷ್ಯಾವಿಭಾಗಗಳಾದವು. ಅದರಲ್ಲಿ ಮಧ್ಯದ ಲಂಕಾರ್ಧದಲ್ಲಿ ಪೌಲಸ್ತ್ಯರಾದ ರಾವಣಕುಂಭಕರ್ಣವಿಭೀಷಣಪ್ರಮುಖ ಅಧಿಪತಿಗಳ ರಾಜಪ್ರಾಸಾದಗಳು ತ್ರಿಕೂಟಾಚಲದಲ್ಲಿ ಸನ್ನಿವಿಷ್ಟವಾದವು ಉತ್ತರದ ಲಂಕಾರ್ಧದಲ್ಲಿ ರಾವಣಜಾತೀಯರಾದ 'ಪೌಲಸ್ತ್ಯ'ರೆಂಬ ರಾಕ್ಷಸರು ವಾಸಿಸುತ್ತಿದ್ದರು. ಅಮೇಲೆ ದಕ್ಷಿಣ ಲಂಕಾರ್ಧದಲ್ಲಿ ಸಾಲಕಟಂಕಟರಾದ ಮಾಲ್ಯವತ್-ಸುಮಾಲಿ-ಮಾಲಿಪ್ರಮುಖ ರಾಕ್ಷಸರು ವಾಸ ಮಾಡಿದರು ಈ ರೀತಿ ಒಂದೇ ಲಂಕೆಯು ಮೂರು ವಿಧವಾಗಿ ವಿಭಕ್ತವಾಗಿದ್ದಿತು. ಅದರಲ್ಲಿ ಲಂಕೆಯ ಮಧ್ಯಮ ಭಾಗವು ಸಮುದ್ರ ಗರ್ಭದಲ್ಲಿ ಮುಳುಗಿ ಕಾಲಾನುಸಾರ ಉಚ್ಛ್ರಿತವಾದ್ದರಿಂದ ಈಗ ಉಪಬಬ್ಧವಾಗುತ್ತಿಲ್ಲ. ಉತ್ತರಭಾಗವಾದರೊ ಭಗ್ನಾವಶಿಷ್ಟವಾದ ರಕ್ಷೋದ್ವೀಪವೆಂಬ ಒಂದು ಭಾಗವು ಅದರ ಅಸಭ್ರಂಶವಾಗಿ ಲಕ್ಕೇದೀವ ಎನಿಸುತ್ತದೆ. ಹೀಗೆ ಇದರ ದಕ್ಷಿಣದ ಮಾಲೇಯಾಧ್ಯುಷಿತವಾದ ಮಾಲಿದ್ವೀಪವೆಂಬ ಭಗ್ನಾವಶೇಷವಾದ ಒಂದು ಭಾಗವು ಅಸಭ್ರಂಶವಾದ ಮಾಲದೀವ ನಾಮದಿಂದ ಕರೆಯಲ್ಪಡುತ್ತದೆ. ಇದು ಮೂರನೆಯದು.

೪ ಇಲ್ಲಿವರೆಗೆ ಈ ಲಕ್ಕದೀವಾದಿ ಮಾಲದೀವಾಂತವಾದ ಉಪದ್ವೀಪದಲ್ಲಿ ನಿರಕ್ಷಗರ್ಭತ್ವವೂ ಹೊಂದುತ್ತದೆ. ಹೇಗೆಂದರೆ — ಪೂರ್ವ ಯುಗದಲ್ಲಿ ಈ ಲಂಕಾ ನಗರಿಯು ನಿರಕ್ಷಸಮೀಪದಲ್ಲಿದ್ದ ಸುವೇಲ ಪರ್ವತ ತ್ರಿಕೂಟ ಪರ್ವತಗಳಿಂದ ಕೂಡಿದ ಒಂದಾನೊಂದು ದ್ವೀಪದಲ್ಲಿ ತ್ರಿಕೂಟಾದ್ರಿಯ ಮಧ್ಯಮಶಿಖರದ ಮೇಲೆ ಇರುತ್ತಿದ್ದಿತು ಅದು ಪೂರ್ವಪಶ್ಚಿಮದಲ್ಲಿ ೧೨೦ ಕ್ರೋಶ ವಿಸ್ತೀರ್ಣವೂ ದಕ್ಷಿಣೋತ್ತರದಲ್ಲಿ ೪೦೦ ಕ್ರೋಶ ದೀರ್ಘವೂ ಆಗಿದ್ದಿತೆಂದು ರಾಮಾಯಣ ವಚನದಿಂದ ಗೊತ್ತಾಗುತ್ತದೆ ಅದರಿಂದ ತ್ರಿಕೂಟದ ಒಂದು ಶಿಖರದಲ್ಲಿದ್ದ ನಗರಿಯೇ ನಾನೂಱು ಕ್ರೋಶಪ್ರಮಾಣವುಳ್ಳದಿರುವಾಗ ತದುಪಲಕ್ಷಿತವಾದ ಈ ದ್ವೀಪವು ಅದಕ್ಕಿಂತ ಹೆಚ್ಚು ದೀರ್ಘವಾಗಿಂಬಹುದಾಗಿದೆ — ಸಶೇಷ

ರಾಮರಾಜ್ಯ ಪರಿಷತ್ತನ್ನು ಬಲಯುತ ಮಾಡಿ

(ಸ್ವಂತ ಸಂದಿಗಾರರಿಂದ ತಂತಿ)

ಸೂರತ್ ಜುಲೈ 26— ಅಖಿಲ ಭಾರತ ರಾಮರಾಜ್ಯ ಪರಿಷತ್ತಿನ ಅಧ್ಯಕ್ಷಣಿ ರಾಜಕುಮಾರಿ ಪ್ರಭಾವತಿ ರಾಜೀಯವರು ಬುಲ್ಸಾರಿನಲ್ಲಿ ಭಾಷಣ ಮಾಡಿ, ಸೂರತ್ತಿಗೆ ತಾ॥ 24 ರಲ್ಲಿ ಆಗಮಿಸಿ, ಬಹು ವೈಭವದಿಂದ ಸ್ವಾಗತಿಸಲ್ಪಟ್ಟರು. ತಾ ॥ 24 ಮತ್ತು 25 ರಲ್ಲಿ ವಿಠಲವಾಡಿಯಲ್ಲಿ ಶ್ರೀ ದ್ವಾರಕಾ ಶಾರದಾ ಪೀಠದ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಭಾರಿ ಸಭೆಗಳು ನಡೆದವು. ಗೋಸ್ವಾಮಿ ಶ್ರೀ ರಾಜರತ್ನಲಾಲ್‌ಜೀಯವರೂ ದಯಮಾಡಿಸಿದ್ದರು. ತಾ ॥ 24-ರಲ್ಲಿ ಪ್ರಭಾವತಿ ರಾಜೀಯವರು ತಮ್ಮ ಹೃದಯಂಗಮ ಭಾಷಣದಲ್ಲಿ ರಾಮರಾಜ್ಯದ ಆದರ್ಶಗಳನ್ನೂ, ತಾತ್ಕಾಲಿಕ ಭಾರತ ಸಮಸ್ಯೆಗಳನ್ನೂ ವಿವರಿಸಿ, ರಾಮರಾಜ್ಯ ಪರಿಷತ್ತನ್ನು ಬಲಪಡಿಸಲು ಸಾರ್ವಜನಿಕರನ್ನು ಕೋರಿದರು; ಮತ್ತು ಅದರ ಉಮೇದುವಾರರಿಗೇ ವೋಟು ಕೊಡಬೇಕೆಂದೂ ಕೋರಿದರು; ತನ್ಮೂಲಕ ಗೋವಧಾ ನಿರೋಧ, ಹಿಂದೂ ಕೋಡು, ಮುಂತಾದವು ಪರಿಹಾರವಾಗಿ, ಭಾರತವನ್ನು ನಿಜವಾಗಿಯೂ ಪುರೋಭಿವೃದ್ಧಿಗೊಳಿಸಲಾಗುವುದೆಂದರು. ಶ್ರೀ ಜಗದ್ಗುರುಗಳವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಸಾರ್ವಜನಿಕರು ಸಂಘಟನೆಗೊಳ್ಳಬೇಕೆಂದು ಕೋರಿದರು. ಪ್ರಭಾವತಿ ರಾಜೀಯವರು ಇಂದು ಬರೋಡಾಕ್ಕೂ, ನಾಳೆ ಅಹಮದಾಬಾದಿಗೂ ಬರುವರು, ಅಖಿಲ ಭಾರತ ರಾಮರಾಜ್ಯ ಪರಿಷತ್ತಿನ ಕಾರ್ಯದರ್ಶಿ ಶ್ರೀ ಚಂದ್ರಶೇಖರ ಶಾಸ್ತ್ರಿಗಳು ಗುಜರಾತಿನಲ್ಲಿ ಎರಡು ತಿಂಗಳು ಪ್ರವಾಸ ಮಾಡುವರು

Edited, Printed and Published by M. S. Krishna Rao. at the Satyavadi Press Chamrajpuram Mysore